ಚಿತ್ರಾ ಕಂಡರ ಅಂಜತಿದ್ದಿ. ಈಗೂ ಟೀವಿವಳಗ ಹಾವಿಂದೇನರೆ ತೋರಸ್ಲಿಕ್ಕತ್ತಿದ್ದರ ಎದ್ದು ಹೋಗ್ತಿ..." ಎಂದು ಹೇಳುತ್ತಲೇ ಹೋದಳು. "ಸಾಕ ಸಾಕ ಬಿಡು. ಆದ್ರೂ ನನಗ ಮದ್ಲ ತಿಳಿದಿಲ್ಲದ ಎಷ್ಟೋ ವಿಷಯಗಳು, ಸಮಸ್ಯಾಗೊಳು ಈಶ್ವರನ ವೇಷಾ ಹಾಕಿದಾಗ ಗೊತ್ತಾದು. ಅದರಾಗ ಅರ್ಧಾ ಪರಿಹಾರಾನೂ ಆದು. ಸಂಬಂಧಾನೂ ಸುಧಾರಿಸಿದ್ವು ನೋಡ" ಎನ್ನುತ್ತ ಮೆತ್ತಗೆ ಅವಳ ಹಣೆ ನೇವರಿಸಿದೆ. ಅವಳು "ಇಲ್ಲ್ಯದ ನೋಡು ನಿನಗ ಬೇಕಾಗಿದ್ದ ಕಾಗದ ಪತ್ರ. ಸಹನಾ ಕಾಲೇಜಿಗ್ಹೋಗೋ ಮುಂದ ತಗದು ಕೊಟ್ಲು. ಅಕಿ ಪುಸ್ತಕದಾಗ ಇಟ್ಟಿದ್ಳಂತ. ಉಳದಾವ್ರೆಲ್ಲಾ ತಕ್ಕಮಟ್ಟಿಗೆ ಆರಾಮನ ಇದ್ದಾರ. ನೀನ ಹೆಂಗರುಳಿನಾವಾ... ಭೋಳೆಶಂಕರ ಇದ್ದಂಗಿದ್ದೀ. ಎಲ್ಲಾರ ತ್ರಾಸು ತಲೀ ಮ್ಯಾಲ ಹಾಕ್ಕೊಂಡು... ಒದ್ದ್ಯಾಡಕೋತ... ನಿನ್ನ ತ್ರಾಸೆಲ್ಲಾ ನನಗೊತ್ತದ. ಮುಂದ ಯಾರೇನಂತಾರ ಅನ್ಲಿ. ನಾ ಸಹಿ ಮಾಡಿಬಿಡ್ತೇನಿ. ಈ ಮನಿ, ನನ್ನ ರೊಕ್ಕಾ ಎಲ್ಲಾ ಉಪಯೋಗ ಮಾಡ್ಕೊ. ಪೆನ್ ತಾ..." ಎಂದು ನಡಗುವ ಸ್ವರದಲ್ಲಿ ಹೇಳಿದಳು.

"ಬ್ಯಾಡವಾ, ವಟ್ಟ ಬ್ಯಾಡ. ಶಿವನ ವೇಷಾ ಹಾಕ್ಕೊಂಡಿದ್ದ ನೋಡು... ನನ್ನ ವ್ಯಾಪಾರ, ವ್ಯವಹಾರ ಎಲ್ಲಾ ಮತ್ತ ಸುರುವಾತು. ಹೊಸಾ ಆರ್ಡರ‍್ಗೋಳು ಬರ್ಲಿಕ್ಕತ್ತಾವ. ಸ್ವಲ್ಪ ಸಾಲಾನೂ ತೀರಸೇನಿ. ಮದ್ಲ ಆಲಸಿತನಾ, ಮನಿ ಗದ್ಲದಾಗ ಫ್ಯಾಕ್ಟರಿ ಕಡೆ ಲಕ್ಷ್ಯ ಕೊಡ್ಲಿಕ್ಕಾಗಲಿಲ್ಲ. ಈಗ ಭಾಳ ಲಕ್ಷ್ಯ ಕೊಟ್ಟು ಕೆಲಸಾ ಮಾಡ್ಲಿಕ್ಕತ್ತೇನಿ. ನಿನ್ನ ಸೊಸಿನೂ ಸುಧಾರಸ್ಯಾಳ. ಬಂದು ನಿನ ಸೇವಾ ಮಾಡ್ತಾಳಂತ. ಅದಕ್ಕ... ನಿನ್ನ ಸಹಿ ಬ್ಯಾಡ, ಆಶೀರ್ವಾದ ಒಂದ ಸಾಕು..." ಎಂದು ಅವಳ ಕೈಯನ್ನು ಕಣ್ಣಿಗೊತ್ತಿಕೊಂಡೆ. "ಹುಚ್ಚಪ್ಪಾ... ಜೀವನ ಹೂವಿನ ಹಾಸಿಗ್ಯಲ್ಲ. ಕಣ್ಣ ಕಟ್ಟಿ ಕಾಡಿನ್ಯಾಗ ಬಿಟ್ಟಂಗ. ಇರೂತನಕಾ ಹಾದಿ ಹುಡಕ್ಕೋತ ಗುದ್ದ್ಯಾಡಬೇಕು" ಎಂದು ನನ್ನ ತಲೆ ನೇವರಿಸಿದಳು. ಹೌದು, ಅದು ನನಗೂ ಈಗ ಚೆನ್ನಾಗಿ ಅರ್ಥವಾಗಿತ್ತು. ದೇವರೆಲ್ಲಾ ಅಂಗೈಯಲ್ಲೇ ಕೊಡಲ್ಲ. ತಡಕಾಡಿ ಹುಡುಕಿದರಷ್ಟೇ... ದಾರಿ, ಅಗೆದು ಮೊಗೆದರಷ್ಟೇ... ನೀರು, ಉತ್ತು ಬಿತ್ತರಷ್ಟೇ... ತುತ್ತು. ಬದುಕಿನ ಗೂಢಾರ್ಥವೊಂದು ಹೊಳೆದಂತಾಗಿ ಎಲ್ಲ ಜಂಜಡ ಕಳೆದು ನಿರಾಳವೆನಿಸಿತು. ನನಗೆ ಬದುಕಿನ ಪಾಠ ಹೇಳಿದ್ದಕ್ಕಾಗಿ ಅವ್ವ ಕೂಡ ನಸುನಗುತ್ತಿದ್ದಳು. ಎರಡು ನಿಮಿಷ ಶಾಂತವಾಗಿ ಹಾಗೇ ಕುಳಿತಿದ್ದೆ. ನನ್ನ ಕೈಯಲ್ಲಿದ್ದ ಅವಳ ಕೈ ಯಾವಾಗ ಕಂಪಿಸುವದನ್ನು ನಿಲ್ಲಿಸಿ ತಣ್ಣಗಾಯಿತೋ ತಿಳಿಯಲಿಲ್ಲ. ಆದರೆ ಸಂತೃಪ್ತಿಯ ಮಂದಹಾಸ ಅವಳ ಮುಖದ ಮೇಲೆ ಶಾಶ್ವತವಾಗಿ ಉಳಿದು ಹೋಯಿತು.

---


## ಮಧುರಾ ಕರ್ಣಮ್

ಕಥೆಗಾರ್ತಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ, ಎಲ್.ಎಲ್.ಬಿ. ವರೆಗೆ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...' 'ಆಕ್ರಮಣ' ಅವರ ಕೆಲವು ಕೃತಿಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.